R No KRNN 12

18 - 2 - 1975

ಸ್ವರ್ಣ ಮಹೋತ್ಸವ ನೆರವೇರಿಸಿದ ಪತ್ರಿಕೆ

in ★ ★ ★ ★ ★

58 th Year
ನೇ ವರ್ಷ

ಸತ್ಯವಾದಿ
SATYAVADI

Golden Jubilee
Celebrated Paper

Satyavadi Daily
Mysore 4

– For Influential Publicity –

ಸಂಪಾದಕರು: ಆರಮನೆ ಪರಸ್ವಾಮಿ ಶಾಸ್ತ್ರಿ ಬಿ.ಎ. ಬಿ.ಎಲ್. ಸಂಪಾದಕರು ಎಂ. ಎಸ್. ಕೃಷ್ಣರಾವ್ [3 ಪ್ರತಿ

ಮೈಸೂರು ನಗರದಲ್ಲಿ ಮಹಿಳೆ ಕೊರಳಿನಿಂದ ಸರ ಅಪಹರಣ

ಹಗಲಲ್ಲೇ ಕಳ್ಳತನ

ಮೈಸೂರು ನಗರದಲ್ಲಿ ಈ ದಿನ ಮಧ್ಯಾಹ್ನ ಸುಮಾರು ಒಂದೂಕಾಲು ಗಂಟೆಯಲ್ಲಿ ಕಳ್ಳತನ ನಡೆಯಿತು.

ಜಾನ್ಸಿ ಲಕ್ಷ್ಮೀಬಾಯಿ ರಸ್ತೆಯಲ್ಲಿ ಮಹಿಳೆಯೊಬ್ಬರು ಹೋಗುತ್ತಿದ್ದಾಗ ಓರ್ವ ಹುಡುಗ ಅವರ ಕೊರಳಿನಲ್ಲಿ ಇದ್ದ ಭಂಗಾರದ ಸರವನ್ನು ಕಿತ್ತು ಓಡತೊಡಗಿದ

ಮಹಿಳೆಯು ಕಿರಿಚಿಕೊಳ್ಳಲು ಹುಡುಗನನ್ನು ಜನ ಅಟ್ಟಿಕೊಂಡು ಹೋಗಿ, ಡಾ|| ಬಿ ಜಿ ದಾಸ್‌ರವರ ಮನೆಯ ಹಿಂಭಾಗದಲ್ಲಿರುವ ಗಲ್ಲಿಯಲ್ಲಿ ಅವನನ್ನು ಸರ ಸಹಿತ ಹಿಡಿದು ಪೋಲೀಸು ಠಾಣೆಗೆ ಅವನನ್ನು ವಶಪಡಿಸಲು ಕರೆದುಕೊಂಡು ಹೋದರು.

★

ಮಾಧ್ವ ತತ್ವ ಸಮ್ಮೇಳನ

ಹೈದರಾಬಾದಿನಲ್ಲಿ ಈ ದಿನ ನಡೆಯುವ 9 ನೇ ಅಖಿಲ ಭಾರತ ಮಾಧ್ವ ತತ್ವ ಸಮ್ಮೇಳನದಲ್ಲಿ 7 ಮಾಧ್ವ ತತ್ವ ಮಠಾಧೀಶರವರು ಭಾಗವಹಿಸುವರು

★

ಗಂಧದ ಮರ ವಶ

ಹಿಕಾಪುರದಿಂದ ಬಂದಿರುವ ವರದಿಯ ಪ್ರಕಾರ, ಶುನ್ನದಕೊಪ್ಪೆ ಹತ್ತಿರ ಅರಣ್ಯದಲ್ಲಿ ಮುಚ್ಚಿಡಲಾಗಿದ್ದ ರೂ 35 ಸಾವಿರ ಬೆಲೆಯ ದೊಡ್ಡ ದೊಡ್ಡ ಗಂಧದ ಮರದ ತುಂಡುಗಳನ್ನು ಪೋಲೀಸರು ವಶಪಡಿಸಿಕೊಂಡರು.

●

ಆಡಳಿತ ಕಾಂಗ್ರೆಸಿಗೆ ಬಹುಮತ

ಗೌರಿಬಿದನೂರು ಪೌರಸಭೆಯ ಚುನಾವಣೆಯಲ್ಲಿ ಆಡಳಿತ ಕಾಂಗ್ರೆಸಿಗೆ 9 ಮತ್ತು ಸಂಸ್ಥಾ ಕಾಂಗ್ರೆಸಿಗೆ 6 ಸ್ಥಾನಗಳು ದೊರೆತಿವೆ.

ಭಾಷಣಕ್ಕೆ ಬಹಿಷ್ಕಾರ

ಸೋಮವಾರ ಶಾಸನ ಸಭೆ ಅಂದಾಜು ಪಟ್ಟಿ ಅಧಿವೇಶನ ಪ್ರಾರಂಭದಲ್ಲಿ ರಾಜ್ಯಪಾಲರ ಭಾಷಣಕ್ಕೆ ಕಮ್ಯೂನಿಸ್ಟೇತರ ವಿರೋಧ ಪಕ್ಷಗಳು ಬಹಿಷ್ಕಾರ ಹಾಕಿ ಹೊರಗೆ ಹೋದರೆಂದು ಭೂಪಾಲ್ ವಾರ್ತೆ.

★

ಪೂರ್ಣ ಹರತಾಳ

ಒರಟು ಮಾರಾಟ ತೆರಿಗೆಯನ್ನು ಶೇ ಭಟಿಸಿ ಉತ್ತರ ಪ್ರದೇಶದ ವ್ಯಾಪಾರವರ್ಗ ಪೂರ್ಣ ಹರತಾಳ ಆಚರಿಸಿತೆಂದು ಲಕ್ನೋ ವಾರ್ತೆ.

○

ಜತ್ತಿಯವರಿಂದ ಪ್ರಶಂಸೆ

ಪೋರ್ಟ್‌ಬ್ಲೇರ್ ಕನ್ನಡ ಸಂಘದ ಕಟ್ಟಡದ ಶಂಕುಸ್ಥಾಪನೆಯನ್ನು ಮಾಡಿದ ಭಾರತ ಉಪಾಧ್ಯಕ್ಷ ಶ್ರೀ ಬಿ ಡಿ ಜತ್ತಿ ಯವರು, ಅಂಡಮಾನ್ ಆಡಳಿತಗಾರರು ಇದಕ್ಕೆ ನಿವೇಶನ ಕೊಟ್ಟದ್ದಕ್ಕೂ, ಮೈಸೂರ ಸರ್ಕಾರ ಇದಕ್ಕೆ ರೂ. 50 ಸಾವಿರ ಇತ್ತುದಕ್ಕೂ ಪ್ರಶಂಸಿಸಿದರು

★

ತಂಡ ತಂಡ ಉಪವಾಸ

ಮೈಸೂರು ತಾಲ್ಲೂಕು ಮಂಡಲಿ ಕಾಲೇಜಿನ ಉಪಾಧ್ಯಾಯರು ತಮ್ಮ 6 ತಿಂಗಳು ಬಾಕಿ ಸಂಬಳದ ಕೇಳಿಕೆಗಾಗಿ ತಂಡ ತಂಡ ಉಪವಾಸ ಪ್ರಾರಂಭಿಸಿದ್ದಾರೆ.

★ ಚಾಮರಾಜನಗರದಲ್ಲಿ ನಿರ್ಮಿಸಲಾಗಿರುವ ಮಹಾವೀರ ಭವನವನ್ನು ಭಾನುವಾರ ಧರ್ಮಸ್ಥಳದ ಧರ್ಮಾಧಿಕಾರಿ ಶ್ರೀ ವೀರೇಂದ್ರ ಹೆಗ್ಗಡೆಯವರು ಉದ್ಘಾಟಿಸಿದರು.

★ ಹರಿಯಾಣ ಉಪ ಚುನಾವಣೆಯಲ್ಲಿ ಆಡಳಿತ ಕಾಂಗ್ರೆಸ್ ಎರಡು ಸ್ಥಾನಗಳನ್ನು ಕಳೆದುಕೊಂಡಿತು

ಕೆಲಸ ನಡೆಯಲಿಲ್ಲ

ಬೊಂಬಾಯಿನಿಂದ ಬಂದಿರುವ ವರದಿ ಪ್ರಕಾರ, ರಿಸರ್ವ್ ಬ್ಯಾಂಕು ಸೇವಕರು ತಾವು ಧೂಳು ಹೊಡೆಯುವ ಮತ್ತು ಸ್ವಚ್ಛಗೊಳಿಸುವ ಕಾರ್ಯ ನಡೆಸಲು ಸೋಮವಾರ ನಿರಾಕರಿಸಿದ್ದರಿಂದ ರಿಸರ್ವ್‌ಬ್ಯಾಂಕು ಅದರ ಸಹಾಯ ಸ್ಥಳಗಳಲ್ಲಿ ಕೆಲಸ ನಿಂತಿದ್ದಿತು ಬ್ಯಾಂಕ್ ಕೌಂಟರ್‌ಗಳು ತೆಗೆಯಲಿಲ್ಲ ಚೆಕ್‌ಗಳು ಕ್ಲಿಯರ್ ಆಗಲಿಲ್ಲ.

●

ಕಲ್ಯಾಣ ನಿಧಿಗೆ ಕರೆ

ಕಲ್ಲೀಕೋಟೆಯಲ್ಲಿ ಮಾಜಿ ಕರ್ನಾಟಕ ಮಂತ್ರಿ ಶ್ರೀ ಅಜೀಜ್ ಸೇಟ್‌ರವರು ಮುಸ್ಲಿಮ್ ಶಿಕ್ಷಣ ಸಂಸ್ಥೆಯ ಸಮ್ಮೇಳನವನ್ನು ಆರಂಭಿಸುತ್ತಾ, ಮುಸ್ಲಿಮರಲ್ಲಿ ಬಡತನ ನೀಗಿಸಲು ಎಲ್ಲ ನಗರದಲ್ಲೂ ಕಲ್ಯಾಣನಿಧಿ ಸ್ಥಾಪಿಸಲು ಕರೆ ಇತ್ತರು.

○

ದೇವರ ಪಠಗಳಿಗೆ ಬೆಂಕಿ

ಮದ್ರಾಸಿನ ಸರ್ಕಾರಿ ಕಲಾ ಕಾಲೇಜಿನ ದ್ರಾವಿಡ ಕಳಗಂ ಸಂಘದ ವಿದ್ಯಾರ್ಥಿಗಳು ಭಾನುವಾರ ಕಾಲೇಜ್ ಆವರಣದಲ್ಲಿದ್ದ ದೇವರ ಪಠಗಳಿಗೆಲ್ಲ ಬೆಂಕಿ ಹೊತ್ತಿಸಿ "ರಾಮರ್ ಒಲಿ ಡೌನ್ ವಿತ್ ರಾಮು ಎಂಬುದಾಗಿ ಕೂಗಿದರು.

●

ತನಿಖೆಗೆ ಆಜ್ಞೆ

ಅಜ್ಮೀರಿನ ಗಾನುದಲ್ಲಿ ಪೋಲೀಸು ಬಂಧನದಲ್ಲಿದ್ದಾಗ ಸತ್ತ ಒಬ್ಬನ ಸಾವಿನ ವಿಚಾರದಲ್ಲಿ ಕಲೆಕ್ಟರು ಮ್ಯಾಜಿಸ್ಟ್ರೇಟಿಕ ತನಿಖೆಗೆ ಆಜ್ಞೆ ಮಾಡಿರುವುದಾಗಿ ರಾಯಪುರ ವಾರ್ತೆ.

●

ಮುಖ್ಯ ಮಂತ್ರಿಗಳ ಕಾಪೇರಿ ನೀರು ಮಾತುಕತೆ ವಿಫಲಗೊಂಡಿತು.

ಕಟು ಟೀಕೆ

ದೇವೂರ್‌ನಲ್ಲಿ ವಿದ್ಯಾರ್ಥಿ ನಿಲಯದ ಶಂಕುಸ್ಥಾಪನೆ ಮಾಡುತ್ತಾ, ವಿದೇಶ ವ್ಯವಹಾರ ಮಂತ್ರಿ ಶ್ರೀ ವೈ ಬಿ ಚವಾಣ್‌ರವರು, ತಮ್ಮ ತಾಯ್ನಾಡನ್ನು ಬಿಟ್ಟು, ಪರದೇಶಗಳಿಗೆ ಹೆಚ್ಚು ಪ್ರಯೋಜನಕ್ಕಾಗಿ ಹೋಗುತ್ತಿರುವ ವಿದ್ಯಾವಂತ ಭಾರತ ಯುವಕರ ನಡವಳಿಕೆಯನ್ನು ಕಟುವಾಗಿ ಟೀಕಿಸಿದರೆಂದು ಪುಣೆ ವಾರ್ತೆ.

★

ಜಾಹೀರಾತಿಗಾಗಿ

ಜಾಹೀರಾತಿಗಾಗಿ ಕಳೆದ ಸಾಲಿನಲ್ಲಿ ಮುಟ್ಟಿದಲ್ಲಿ ಪ್ರತಿ ವರ್ಷ ರೂ 121 - 5 ಕೋಟಿಗೆ ಸ್ವಲ್ಪ ಹೆಚ್ಚು ವೆಚ್ಚವಾಗುತ್ತಿದೆ ಎಂದು ನಡೆಸಿದ ಸರ್ವೆಯಿಂದ ತಿಳಿದಿರುತ್ತಾಗಿರುತ್ತದೆ.

●

ಭೂ ಸುಧಾರಣಾ ನ್ಯಾಯಮಂಡಲಿಗಳು

ಬೆಂಗಳೂರು— ಶಾಸನ ಸಭೆಯಲ್ಲಿ ವಿರೋಧ ನಾಯಕ ಶ್ರೀ ದೇವೇಗೌಡರು, ನ್ಯಾಯಾಂಗ ಮಂಡಲಿಯಲ್ಲಿ ಡಿಸ್ಮಿಸ್ ಆದ ಒಬ್ಬ ಅರಣ್ಯಾಧಿಕಾರಿಯೂ, ಶಿಕ್ಷಿತ ಅಪರಾಧಿ ಒಬ್ಬರಿರುವರೆಂದೂ ಹೇಳಿದರು – ಕೆಲವು ಕಡೆ ನ್ಯಾಯಮಂಡಲಿಗಳಲ್ಲಿ ಏಕ ಸದಸ್ಯ ಕಾಂಗ್ರೆಸ್ ಶಾಸಕರಿರುವರೆಂದು ಹೇಳಿದರು – ಸರ್ಕಾರವು ನ್ಯಾಯಾಂಗ ಮಂಡಲಿಯ ಸದಸ್ಯರ ಆಸ್ತಿ ವಿವರ ಕೇಳಬೇಕೆಂದೂ, ಅವರಲ್ಲಿ ಎಷ್ಟು ಜನ ತಮ್ಮ ಜನ ತಮ್ಮ ಗೇಣಿದಾರರನ್ನು ಹೊರದೂಡಿರುವರೆಂಬುದನ್ನು ತಿಳಿದುಕೊಳ್ಳಬೇಕೆಂದೂ ಹೇಳಿದರು.

★

ದೇವಾಲಯಗಳ ನವೀಕರಣ

ಖಟ್ಮಂಡು— ನೇಪಾಳದಲ್ಲಿ ದೇವಾಲಯಗಳ ಆಡಳಿತ ನೋಡಿಕೊಳ್ಳುವ ಗುಠಿ ಸಂಸ್ಥೆಯು ಹಲವು ದೇವಾಲಯಗಳ ನವೀಕರಣಕ್ಕೆ ರೂ. 3500000 ಕೊಟ್ಟಿದೆ.

ಮೊದಲ ತೇದಿ

ಯಾಕೆ ಬಂದಿತಪ್ಪ ಮೊದಲನೆ ತೇದಿ
ಎದೆ ಒಡೆಯುತಿದೆ-ನೋಡಿ ಸಾಲದ ಯಾದಿ.
ಎಷ್ಟು ಕೊಡಬೇಕು ? ಯಾರಿಗೆ ಕೊಡಬೇಕು ?
ಎಲ್ಲಿ ಕೊಡಬೇಕು ? ಎಲ್ಲಿ ಬಿಡಬೇಕು ?
ಹೀಗೆಂದು ತಲೆ ಕೆಡಿಸಿಕೊಳ್ಳಲು ಬಂದಳೆಷ್ಟ ರಾಣಿ ॥
ಮೊದಲು ಕೊಟ್ಟ ಬಿಡಿರಿ ನೀವು ಕಿರಾಣಿ
ಬಂದ ನಾಲ್ಕು ನೂರರಲಿ ಕಿರಾಣಿ ಮುನ್ನೂರೈವತ್ತು
ಉಳಿದವು ಕಿಸೆಯಲಿ ಬರೀ ಇಪ್ಪತ್ತು
ಮನೆಯ ಕಿಂತಾಯಾ ಕೊಡಬೇಕು ಮೂವತ್ತೈದು
ಮನೆಯಾಕೆ ಹೇಳಿದಳು ಹಾಲಿನವು ಹದಿನೈದು
ಮುಗಿದು ಹೋದವು ಕಿಸೆಯಲ್ಲಿದ್ದ ಠೊಕ್ಕ
ಇಂದಳು ಹಿರಿಯ ಮಗಳು ಸೆಕಂಡ ಟರ್ಮು ಫೀಸು
ಮುಗ ಬಂದು ಹೇಳಿದ ನನಗೆ ಪ್ಯಾಂಟ ಪೀಸು
ಕಾಟ ತಡೆಯದೆ ಓಡಿದೆ ಕರೆಯಲೆನಗೆ ಆಫೀಸು
ಹಾಸಿಗೆ ಇದ್ದಷ್ಟು ಕಾಲು ಚಾಚಬೇಕು ನನಗೆ ಗೊತ್ತು
ಹಾಸಿಗೆಯೇ ಇಲ್ಲದೆ ಕಾಲು ಹೊರಗೆ ಬಿತ್ತು
ಅಯ್ಯೋ ಶಿವನೆ ಹಕ್ಕ ಬಾರದೆ ಕರ್ನಾಟಕದ ಲಾಟರಿ
ಮಾಡಬಹುದು ಆಗ ಸಂಸಾರೂ ಭರ್ಜರಿ

— ಸೂಗಣ್ಣ ಸುಂಡೇಕಾರ [ವಿಶ್ವಕಲಾ ಣ

SHAKTI SUDHA

A Superb Tonic

Contribute Liberally to the National Defence Fund

Quality Printing Neat Binding

Lakshminarasimha Press

Sivarampet Mysore

ವುಡ್‌ಲಾಂಡ್ಸ್ 14 2 75 ರಿಂದ

ಅಮೋಘ 2ನೇ ವಾರ

ದಿ ಚೇಟ

ಅಪೂರ್ವ ಈಸ್ಟ್‌ಮನ್ ಕಲರ್ ಹಿಂದಿ ಕಲಾಕೃತಿ

ಪಾತ್ರ– ವಿನೋದ್ ಖನ್ನ ಮೌಸಮಿ ಚಟರ್ಜಿ ದಿನ ೧೧ ಪ್ರದರ್ಶನಗಳು

ಅಪೆರಾ 14 2 75 ರಿಂದ

ಬಾಲನಾಗಮ್ಮ

ಅಮೋಘ ತೆಲಗು ಚಿತ್ರ

ಪಾತ್ರ – ಎನ್ ಟಿ ಆರ್ ಅಂಜಲಿ ದೇವಿಂಗಿ ದಿನ 3 ಪ್ರದರ್ಶನಗಳು

ಭಾರತದಲ್ಲಿ ಗೋವಧೆ

ಪೂರ್ಣ ನಿಶೇಧವಾಗಲಿ



Protect the Cow

Help The Gorakshana

—Humanitarian Propoganda Monthly

Edited Printed and Published by Dharmapracharanirata M S. Krishna Rao (Proprietor) at the Satyavadi Press, Chamarajapuram Mysore